# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 115(984) |
| ಸದಸ್ಯರ ಹೆಸರು | : | ಶ್ರೀ.ಮಂಜುನಾಥ ಭಂಡಾರಿ (ಸ್ಥಳೀಯ ಸಂಸ್ಥೆಗಳಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 14.03.2025 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಇರುವ ನಿಗಮಗಳೆಷ್ಟು; ಅವು ಯಾವುವು ಹಾಗೂ ಅವುಗಳನ್ನು ಸ್ಥಾಪಿಸಿದ ಉದ್ದೇಶಗಳೇನು; | ಸಮಾಜ ಕಲ್ಯಾಣ ಇಲಾಖಾ ವ್ಯಾಪ್ತಿಯಲ್ಲಿ ಈ ಕೆಳಕಂಡ ನಿಗಮಗಳು ಕಾರ್ಯನಿರ್ವಹಿಸುತ್ತಿವೆ.<br>1. ಡಾ\|\|ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ.<br>2. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ.<br>3. ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ.<br>4. ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ.<br>5. ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ.<br>6. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ.<br>7. ಡಾ\|\| ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ.<br>ಮೇಲ್ಕಂಡ ನಿಗಮಗಳನ್ನು ಬಡತನ ರೇಖೆಗಿಂತ ಕೆಳಗಿರುವ ಪರಿಶಿಷ್ಟ ಜಾತಿಯವರ ಆರ್ಥಿಕ ಮತ್ತು ಸಾಮಾಜಿಕ ಅಭಿವೃದ್ಧಿಗಾಗಿ ವಿವಿಧ ಕಾರ್ಯಕ್ರಮಗಳನ್ನು ರೂಪಿಸಿ ಸದರಿ ಕಾರ್ಯಕ್ರಮಗಳ ಅನುಷ್ಠಾನಕ್ಕೆ ಸಾಲ ಸಹಾಯಧನ ನೀಡಲಾಗುತ್ತಿದೆ.<br>ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಪರಿಶಿಷ್ಟ ಜಾತಿಯ ಜನರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಉದ್ದೇಶಕ್ಕಾಗಿ ವಿವಿಧ ಸಮುದಾಯಗಳಿಗೆ ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸಲಾಗಿದೆ. |
| ಆ) | ಯಾವ ಯಾವ ನಿಗಮಗಳಡಿ ಜಾತ್ರೆಗಳನ್ನು ಆಯೋಜಿಸಲಾಗುತ್ತಿದೆ; ಜಾತ್ರೆಗಳನ್ನು ಯಾವ ಸಂಸ್ಥೆಗಳ ಮೂಲಕ ಆಯೋಜಿಸಲಾಗುತ್ತಿದೆ; ಯಾವ ಕಾರ್ಯಕ್ರಮಕ್ಕೆ ಹಣವನ್ನು ಖರ್ಚು ಮಾಡಲಾಗುತ್ತಿದೆ; ಜಾತ್ರೆಗಳಿಗಾಗಿ ಈವರೆಗೆ ಖರ್ಚು ಮಾಡಲಾದ ಮೊತ್ತವೆಷ್ಟು; ಜಾತ್ರೆಗಳ ಆಯೋಜನೆಯಿಂದಾಗುವ ಪ್ರಯೋಜನಗಳೇನು; (ವರ್ಷವಾರು ಕಾರ್ಯಕ್ರಮವಾರು ಮಾಹಿತಿ ನೀಡುವುದು) | ನಿಗಮಗಳ ವತಿಯಿಂದ ಯಾವುದೇ ಜಾತ್ರೆಗಳನ್ನು ಆಯೋಜಿಸಿರುವುದಿಲ್ಲ. |
| ಇ) | ವಿವಿಧ ನಿಗಮಗಳಡಿ ಫಲಾನುಭವಿ ಯಾಧಾರಿತ ನೇರ ಸೌಲಭ್ಯ ಯೋಜನೆಗಳಿಗೆ ವೆಚ್ಚ ಮಾಡಲಾದ ಅನುದಾನವೆಷ್ಟು; ಇತರ ಅಭಿವೃದ್ಧಿ ಕಾರ್ಯಕ್ರಮಗಳಿಗೆ ಖರ್ಚು ಮಾಡಿದ ಹಣವೆಷ್ಟು; (ನಿಗಮವಾರು ಹಾಗೂ ಕಾರ್ಯಕ್ರಮವಾರು ಮಾಹಿತಿ ನೀಡುವುದು) | ವಿವಿಧ ನಿಗಮಗಳಡಿ ಫಲಾನುಭವಿಯಾಧಾರಿತ ನೇರ ಸೌಲಭ್ಯ ಯೋಜನೆಗಳಿಗೆ ವೆಚ್ಚ ಮಾಡಲಾದ ಅನುದಾನ ವಿವರಗಳನ್ನು ಅನುಬಂಧದಲ್ಲಿ ನೀಡಿದೆ. |

Scanned with OKEN Sc.

| | | |
|---|---|---|
| ಈ) | ಫಲಾನುಭವಿಯಾಧಾರಿತ ನೇರ ಅಭಿವೃದ್ಧಿ ಹೊರತುಪಡಿಸಿ ಇತರ ಅಭಿವೃದ್ಧಿ ಕಾರ್ಯಗಳಿಗೆ ವೆಚ್ಚ ಮಾಡಿದ ಮೊತ್ತವೆಷ್ಟು; | ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದ ಪ್ರಾರಂಭದಲ್ಲಿ ತಾಂಡಾಗಳಿಗೆ ಮೂಲಭೂತ ಸೌಕರ್ಯವನ್ನು ನೀಡಲು ಸ್ಥಾಪಿಸಲಾಗಿದೆ. ತದನಂತರ ಮೂಲಭೂತ ಸೌಕರ್ಯಗಳೊಂದಿಗೆ ಆರ್ಥಿಕಾಭಿವೃದ್ಧಿ ಕಾರ್ಯಕ್ರಮಗಳನ್ನು ಸದರಿ ನಿಗಮದಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಅದ್ದರಿಂದ ಸಮುದಾಯ ಕಾಮಗಾರಿಗಳಿಗೆ ಪ್ರಸಕ್ತ ಸಾಲಿನಲ್ಲಿ ರೂ.12.35 ಕೋಟಿಗಳ ವೆಚ್ಚ ಮಾಡಲಾಗಿದೆ.<br><br>ಇತರೆ ನಿಗಮಗಳಲ್ಲಿ ಫಲಾನುಭವಿಯಾಧಾರಿತ ನೇರ ಅಭಿವೃದ್ಧಿ ಯೋಜನೆ ಹೊರತುಪಡಿಸಿ ಇತರೆ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ. |
| ಉ) | ಭಾರತೀಯ ಸಂವಿಧಾನದ ರಕ್ಷಣೆಗಾಗಿ ವಿವಿಧ ನಿಗಮಗಳಡಿಯಲ್ಲಿ ಕೈಗೊಳ್ಳಲಾಗಿರುವ ಕಾರ್ಯಕ್ರಮಗಳಾವುವು;<br><br>ಈ ಕಾರ್ಯಕ್ರಮಗಳನ್ನು ಯಾವ ಸಂಸ್ಥೆಗಳ ಮೂಲಕ ಕೈಗೊಳ್ಳಲಾಗಿದೆ ಹಾಗೂ ಇದಕ್ಕಾಗಿ ಖರ್ಚು ಮಾಡಿದ ಹಣವೆಷ್ಟು? (ನಿಗಮವಾರು ಕಾರ್ಯಕ್ರಮವಾರು ಮಾಹಿತಿ ನೀಡುವುದು) | ಭಾರತೀಯ ಸಂವಿಧಾನದ ರಕ್ಷಣೆಗಾಗಿ ವಿವಿಧ ನಿಗಮಗಳ ಅಡಿಯಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಿರುವುದಿಲ್ಲ.<br>ಕರ್ನಾಟಕ ಸರ್ಕಾರದಿಂದ ಸಂವಿಧಾನ ದಿನಾಚರಣೆ ಪ್ರಯುಕ್ತ ರಾಷ್ಟ್ರೀಯ ಮಟ್ಟದ ಸಮ್ಮೇಳವನ್ನು ಮತ್ತು ಸಂವಿಧಾನದ ಜಾಗೃತಿ ಜಾಥಾ ಕಾರ್ಯಕ್ರಮವನ್ನು ನಿರ್ವಹಿಸಲಾಗಿದೆ.<br><br>ಸದರಿ ಕಾರ್ಯಕ್ರಮಗಳಿಗೆ ಸಚಿವ ಸಂಪುಟದ ಅನುಮೋದನೆಯೊಂದಿಗೆ ನಿಗಮಗಳಿಗೆ ನೀಡಿರುವ ಅನುದಾನದಿಂದ ಈ ಕೆಳಗಿನಂತೆ ವೆಚ್ಚ ಮಾಡಲಾಗಿದೆ.<br>1) ಡಾ॥ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ – ರೂ.2.00 ಕೋಟಿ<br>2) ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ – ರೂ.1.25 ಕೋಟಿ<br>3) ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ - ರೂ.1.25 ಕೋಟಿ<br>4) ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿ ಅಭಿವೃದ್ಧಿ ನಿಗಮ - ರೂ.1.00 ಕೋಟಿ<br>5) ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ- ರೂ.1.50 ಕೋಟಿ<br>6) ಡಾ॥ ಬಾಬು ಜಗಜೀವನ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ – ರೂ.1.50 ಕೋಟಿ<br>ಸದರಿ ಮೊತ್ತವನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಅಧೀನದಲ್ಲಿರುವ ಕರ್ನಾಟಕ ಮಾರ್ಕೆಟಿಂಗ್ ಕಮ್ಯೂನಿಕೇಷನ್ ಅಡ್ವರ್ಟೈಸಿಂಗ್ ಲಿಮಿಟೆಡ್ ಮುಖಾಂತರ ಸಂವಿಧಾನ ರಕ್ಷಣಾ ಕಾರ್ಯಕ್ರಮಗಳಿಗೆ ಖರ್ಚು ಮಾಡಲಾಗಿದೆ. |

**SWD/94/SDC/2025**

**(ಡಾ: ಹೆಚ್.ಸಿ ಮಹದೇವಪ್ಪ)**
ಸಮಾಜ ಕಲ್ಯಾಣ ಸಚಿವರು.

Scanned with OKEN Sc

ಮಾನ್ಯ ವಿಧಾನ ಪರಿಷತ್ ಸದಸ್ಯರಾದ. ಶ್ರೀ.ಮಂಜುನಾಥ ಭಂಡಾರಿ ಇವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 115(984) ಕ್ಕೆ ಅನುಬಂಧ

1. ಡಾ|| ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಯೋಜನೆಗಳು | 2024-25ನೇ ಸಾಲಿನಲ್ಲಿ ವೆಚ್ಚವಾದ ಅನುದಾನ |
|---|---|---|
| 01 | ಸ್ವಯಂ ಉದ್ಯೋಗ-ನೇರ ಸಾಲ | 8.60 |
| 02 | ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ 1,2 | 2.63 |
| 03 | ಸ್ವಾವಲಂಬಿ ಸಾರಥಿ | 0.84 |
| 04 | ಮೈಕ್ರೋ ಕ್ರೆಡಿಟ್ ಪ್ರೇರಣಾ | 1.52 |
| 05 | ಗಂಗಾ ಕಲ್ಯಾಣ | 57.74 |
| 06 | ಭೂ ಒಡೆತನ | 5.56 |
| | **ಒಟ್ಟು** | **76.89** |

2. ಡಾ|| ಬಾಬು ಜಗಜೀವನ ರಾ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳು | 2024-25ನೇ ಸಾಲಿನಲ್ಲಿ ವೆಚ್ಚವಾದ ಅನುದಾನ |
|---|---|---|
| 01 | ತರಬೇತಿ ಕಾರ್ಯಕ್ರಮಗಳು | 37.02 |
| 02 | ಸ್ವಯಂ ಉದ್ಯೋಗ ಯೋಜನೆಗಳು | 35.03 |
| 03 | ಮೂಲಭೂತ ಸೌಕರ್ಯ ಅಭಿವೃದ್ಧಿ | 310.75 |
| 04 | ಲಿಡ್ಕರ್ ಪುನಃಶ್ಚೇತನ ಕಾರ್ಯಕ್ರಮ | 270.05 |
| 05 | ಆವರ್ತನಿಧಿ | 173.38 |
| ಒಟ್ಟು | | **826.23** |

3. ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮ

(ರೂ.ಕೋಟಿಗಳಲ್ಲಿ )

| ಕ್ರ. ಸಂ | ಯೋಜನೆಗಳು | 2024-25ನೇ ಸಾಲಿನಲ್ಲಿ ವೆಚ್ಚವಾದ ಅನುದಾನ |
|---|---|---|
| 01 | ಸ್ವಯಂ ಉದ್ಯೋಗ ನೇರಸಾಲ | 38.80 |
| 02 | ಉದ್ಯಮ ಶೀಲತಾ ಅಭಿವೃದ್ಧಿ ಯೋಜನೆ | 19.60 |
| 04 | ಮೈಕ್ರೋ ಕ್ರೆಡಿಟ್ ಪ್ರೇರಣಾ ಯೋಜನೆ | 7.00 |
| 05 | ಗಂಗಾ ಕಲ್ಯಾಣ ಯೋಜನೆ | 8.33 |
| 06 | ಭೂ ಒಡೆತನ ಯೋಜನೆ | 39.00 |
| | **ಒಟ್ಟು** | **112.73** |

Scanned with OKEN Sc.

4. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಅಲೆಮಾರಿ ಅಭಿವೃದ್ಧಿ ನಿಗಮ.

(ರೂ.ಲಕ್ಷಗಳಲ್ಲಿ)

| ಕ್ರ. ಸಂ | ಯೋಜನೆಗಳು | 2024-25ನೇ ಸಾಲಿನಲ್ಲಿ ವೆಚ್ಚವಾದ ಅನುದಾನ |
|---|---|---|
| 1 | ನೇರ ಸಾಲ | 586.00 |
| 2 | ಉದ್ಯಮಶೀಲತಾ | 338.00 |
| 3 | ಸ್ವಾವಲಂಭಿ ಸಾರಥಿ | 596.00 |
| 4 | ಭೂ ಒಡೆತನ | 1501.07 |
| | | **3021.07** |

5. ಕರ್ನಾಟಕ ತಾಂಡ ಅಭಿವೃಧ್ಧಿ ನಿಗಮ

(ರೂ.ಕೋಟಿಗಳಲ್ಲಿ )

| ಕ್ರ ಸಂ | ಯೋಜನೆಯಹೆಸರು | 2024-25ನೇ ಸಾಲಿನಲ್ಲಿ ವೆಚ್ಚವಾದ ಅನುದಾನ |
|---|---|---|
| 1 | ಸ್ವಯಂ ಉದ್ಯೋಗ ನೇರ ಸಾಲ ಯೋಜನೆ | 8.92 |
| 2 | ಉದ್ಯಮ ಶೀಲತಾ ಯೋಜನೆ | 1.79 |
| 3 | ಸ್ವಾವಲಂಭಿ ಸಾರಥಿ ಯೋಜನೆ | 1.17 |
| 3 | ಭೂ ಒಡೆತನ ಯೋಜನೆ | 12.70 |
| 4 | ಗಂಗಾ ಕಲ್ಯಾಣ ಯೋಜನೆ | 4.10 |
| 5 | ಮೈಕ್ರೊ ಕ್ರೆಡಿಟ್ ಯೋಜನೆ | 0.44 |
| | **ಒಟ್ಟು** | **29.12** |

Scanned with OKEN S